KAHS610019882019

# 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಚನ್ನರಾಯಪಟ್ಟಣ.

**ಉಪಸ್ಥಿತರು : ಶ್ರೀ . ಪುರುಷೋತ್ತಮ ಟಿ .ಪಿ .**

ಬಿ.ಎ., ಎಲ್.ಎಲ್.ಬಿ.
1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆ: 370/2019**

**ದಿನಾಂಕ**: 06 **ನೇ ಮಾರ್ಚ್ 2026**

**ವಾದಿಃ**

1) ಯಶೋಧಮ್ಮ ಕೋಂ ಚಂದ್ರೇಗೌಡ,
ವಯಸ್ಸು ಸುಮಾರು 50 ವರ್ಷ,
ವಾಸಃ ಗೋಳಿಹೊನ್ನೇನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ ಚನ್ನರಾಯಪಟ್ಟಣ ತಾಲ್ಲೂಕು

2) ಲಕ್ಷ್ಮಮ್ಮ ಬಿನ್ ಚಂದ್ರೇಗೌಡ,
ಕೋಂ ಶ್ರೀನಿವಾಸ ,
ವಯಸ್ಸು ಸುಮಾರು 33 ವರ್ಷ,
ಗೋಳಿಹೊನ್ನೇನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(ಪರವಾಗಿ ಶ್ರೀ. ವೈ.ಜಿ.ಡಿ ವಕೀಲರು )**

**ವಿರುದ್ಧ**

**ಪ್ರತಿವಾದಿಗಳು:** ಚಂದ್ರೇಗೌಡ ಬಿನ್ ಮರೀಗೌಡ,
ವಯಸ್ಸು ಸುಮಾರು 60 ವರ್ಷ,
ಗೋಳಿಹೊನ್ನೇನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು

**(ಪರವಾಗಿ ಶ್ರೀ. ಡಿ ಎ. ವಿ., ವಕೀಲರು)**

| | | | | |
|---|---|---|---|---|
| 1. ದಾವಾ ದಾಖಲು ಮಾಡಿದ ದಿನಾಂಕ | : | 08-07-2019 | | |
| 2. ದಾವಾ ಸ್ವರೂಪ | : | ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆ | | |
| 3.ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | : | 06-01-2020 | | |
| 4. ತೀರ್ಪು ಉಚ್ಚರಿಸಿದ ದಿನಾಂಕ | : | 06.06.2026 | | |
| Total duration | : | Year/s | Month/s | Day/s |
| | | 06 | 10 | 29 |

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

## ಃ ತೀರ್ಪು ಃ

ವಾದಿಯರು ಪ್ರಸ್ತುತ ದಾವೆಯನ್ನು ಸಲ್ಲಿಸಿ, ದಾವಾದ ಅನುಸೂಚಿ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ಹಿಂದೂ ಅವಿಭಕ್ತ ಕುಟುಂಬದ ಅವಿಭಾಜಿತವಾದ ಹಾಗೂ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಯಾದ ಕಾರಣ ವಾದಿಯು ಸಮಭಾಗದ ಹಿಸ್ಸೆಗೆ ಅಂದರೆ 1/2 ಭಾಗದ ಹಿಸ್ಸೆಗೆ ಹಕ್ಕುಳ್ಳವರೆಂದು ನಿರ್ಣಯಿಸಿ ವಾದಿಯರ ಬಾಬ್ತು ಹಿಸ್ಸಾ ಹಕ್ಕಿನ ಆಸ್ತಿಯನ್ನು ಅಳತೆ ಮತ್ತು ಚೆಕ್ಕುಬಂಧಿಯಂತೆ ಉತ್ತಮ, ಮಧ್ಯಮ ಅನುಸರಿಸಿ ವಾದಿಯರು ಪ್ರತ್ಯೇಕ ಸ್ವಾಧೀನ ಹೊಂದುವಂತೆಯೂ ಹಾಗೂ ಮಾನ್ಯ ನ್ಯಾಯಾಲಯಕ್ಕೆ ತೋರಿ ಬರುವ ಇತರೆ ಎಲ್ಲಾ ತಾಜಾ ಪರಿಹಾರಗಳನ್ನು ಮತ್ತು ನ್ಯಾಯಾಲಯಕ್ಕೆ ತೋಚಿದ ಇತರೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

2. **ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:**

ತಾನು ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿನ ಸಂಬಂಧ ಪ್ರತ್ಯೇಕ ಹಿಸ್ಸೆ ಮತ್ತು ವಿಭಾಗಕ್ಕಾಗಿ ಕೋರಿ ಸಲ್ಲಿಸಿರುತ್ತೇನೆ. 1ನೇ ವಾದಿಗೆ ಪ್ರತಿವಾದಿಯು ಯಜಮಾನರಾಗಿರುತ್ತಾರೆ. 2ನೇ ವಾದಿಗೆ ಪ್ರತಿವಾದಿಯು ತಂದೆಯಾಗಿರುತ್ತಾರೆ. 1ನೇ ವಾದಿಯು 2ನೇ ವಾದಿಗೆ ತಾಯಿಯಾಗಿರುತ್ತಾರೆ. 1ನೇ ವಾದಿಯು ಪ್ರತಿವಾದಿಯನ್ನು ದಿನಾಂಕ:19.10.1979 ನೇ ಸಾಲಿನಲ್ಲಿ 1ನೇ ವಾದಿಯ ಮನೆಯಲ್ಲಿ ವಿವಾಹ ವಾಗಿರುತ್ತಾರೆ. ವಿವಾಹದ ಸಂದರ್ಭದಲ್ಲಿ ಪ್ರತಿವಾದಿಯು ವಾದಿಯ ಮನೆಯಿಂದ ರೂ.

50,000/- ಗಳ ನಗದು ಹಣ ಹಾಗೂ 50ಗ್ರಾಂ ಚಿನ್ನದ ಒಡವೆಗಳನ್ನು ವರದಕ್ಷಿಣೆಯಾಗಿ ಪಡೆದುಕೊಂಡು ವಿವಾಹವಾಗಿರುತ್ತಾರೆ. ವಿವಾಹವಾದ ನಂತರ ಪ್ರತಿವಾದಿಯು ವಾದಿಯನ್ನು ಪ್ರಾರಂಭದಲ್ಲಿ ಚೆನ್ನಾಗಿ ನೋಡಿಕೊಂಡಿದ್ದು, 2ನೇ ವಾದಿಯು ಜನಿಸಿದ ನಂತರ ವಾದಿಯರನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರುತ್ತಾರೆ. ನಂತರ ವಾದಿಯರಿಗೆ ಪ್ರತಿವಾದಿಯ ಯಾವುದೇ ಸಹಕಾರ ಸಿಕ್ಕಿರುವುದಿಲ್ಲ. ಪ್ರತಿವಾದಿಯು ಮಧ್ಯ ವ್ಯಸನಿಯಾಗಿದ್ದು, ಯಾವುದೇ ಜವಬ್ದಾರಿ ಇಲ್ಲದೇ ತಿರುಗಾಡಿಕೊಂಡು ಇರುತ್ತಾರೆ. ನಂತರ ವಾದಿಯರು ಸ್ವತಃ ದುಡಿದು ಜೀವನ ಸಾಗಿಸುತ್ತಿರುತ್ತಾರೆ. ಪ್ರತಿವಾದಿಯು 2ನೇ ವಾದಿಗೆ ಯಾವುದೇ ವಿದ್ಯಾಭ್ಯಾಸವನ್ನಾಗಲೀ ಕೊಡಿಸಿರುವುದಿಲ್ಲ ಹಾಗೂ ವಿವಾಹವನ್ನಾಗಲೀ, ಅದರ ಖರ್ಚನ್ನಾಗಲೀ ಸಹ ಮಾಡಿರುವುದಿಲ್ಲ. ವಾದಿಯರು ಪ್ರಾರಂಭದಿಂದಲೂ ಕಷ್ಟದ ಜೀವನವನ್ನು ಸಾಗಿಸಿಕೊಂಡು ಬಂದಿರುತ್ತಾರೆ. ಪ್ರತಿವಾದಿಗೆ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿ ಇದ್ದು, ಅದರಲ್ಲಿ ವಾದಿಯರಿಗೆ ಸಮನಾದ ಹಿಸ್ಸೆ ಮತ್ತು ಭಾಗಾಂಶ ಇರುತ್ತವೆ. ಪ್ರತಿವಾದಿಗೆ ಇದ್ದ ಪಿತ್ರಾರ್ಜಿತ ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದು, ಅದರಲ್ಲಿ ಯಾವುದೇ ಆಧಾಯವನ್ನು ವಾದಿಯರಿಗೆ ನೀಡಿರುವುದಿಲ್ಲ. ಅಲ್ಲದೇ, ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಮತ್ತು ಭಾಗಾಂಶವನ್ನು ನೀಡಿರುವುದಿಲ್ಲ. ಪ್ರತಿವಾದಿಯ ತಂದೆಗೆ ಪ್ರತಿವಾದಿ ಸೇರಿ 3 ಜನ ಮಕ್ಕಳಿದ್ದು, ಪ್ರತಿವಾದಿ ಹಾಗೂ ಸರೋಜಮ್ಮ ಹಾಗೂ ಮಂಜೇಗೌಡ ಎಂಬ ಸಹೋದರ ಸಹೋದರಿರುತ್ತಾರೆ. ಪ್ರತಿವಾದಿಯ ತಂದೆ ಜೀವಂತ ಇರುವಾಗಲೇ ಆಸ್ತಿಯಲ್ಲಿ ವಿಭಾಗ

ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿಗೆ ಬಂದ ಆಸ್ತಿಯಲ್ಲಿ ಹಿಸ್ಸೆ ಮತ್ತು ಭಾಗಾಂಶಕ್ಕೆ ದಾವಾ ದಾಖಲು ಮಾಡಲಾಗಿರುತ್ತದೆ. ಸದರಿ ಆಸ್ತಿಯು 2ನೇ ವಾದಿಯ ತಾತನ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತವಾದ ಆಸ್ತಿಗಳಾಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಮುರಾರಹಳ್ಳಿ ಗ್ರಾಮದ ಸ.ನಂ 50/ಪಿ15 ರಲ್ಲಿ 1.00 ಎಕರೆ, ಹಾಗೂ ಸರ್ವೆ ನಂ. 51/2 ರಲ್ಲಿ 1 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದರಿ 1 ಎಕರೆ 20 ಗುಂಟೆ ಜಮೀನು ಪ್ರತಿವಾದಿಯ ತಂದೆ ಮರೀಗೌಡ ರವರ ಹೆಸರಿನಲ್ಲಿರುತ್ತದೆ. ಆದರೆ ಪಹಣಿಯಲ್ಲಿ ತಪ್ಪಾಗಿ ನಮೂದಾಗಿರುತ್ತದೆ. ಚಂದ್ರೇಗೌಡ ಬಿನ್ ಮರೀಗೌಡ ಎಂಬುದಾಗಬೇಕಾಗಿದ್ದು, ಮರೀಗೌಡ ಬಿನ್ ಚಂದ್ರೇಗೌಡ ಎಂದು ರೆವಿನ್ಯೂ ಅಧಿಕಾರಿಗಳು ಪಹಣಿಯಲ್ಲಿ ಅಂಗೀಕರಿಸಿರುತ್ತಾರೆ. ಸದರಿ ಆಸ್ತಿಯು ಪ್ರತಿವಾದಿ ಮತ್ತು 2ನೇ ವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ವಾದಿಯರ ಮತ್ತು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು, ಎಲ್ಲರಿಗೂ ಸಮನಾದ ಹಿಸ್ಸೆ ಮತ್ತು ಭಾಗಾಂಶ ಇರುತ್ತದೆ. ಸದರಿ ಆಸ್ತಿಯಲ್ಲಿ ಬಂದಂತಹ ಉತ್ಪತ್ತಿಯನ್ನು ಪ್ರತಿವಾದಿಯು ತೆಗೆದುಕೊಂಡಿದ್ದು, ವಾದಿಯರಿಗೆ ಯಾವುದೇ ರೀತಿಯ ಉತ್ಪತ್ತಿಯನ್ನು, ಹಕ್ಕನ್ನು ನೀಡಿರುವುದಿಲ್ಲ. ವಾದಿಯರು ಅನೇಕ ಬಾರಿ ಪ್ರತಿವಾದಿಯನ್ನು ದಾವಾ ಷಡ್ಯೂಲ್ ಸ್ವತ್ತಿನಲ್ಲಿ ಹಿಸ್ಸೆ ಮತ್ತು ಭಾಗಾಂಶವನ್ನು ಕೊಡಬೇಕೆಂದು ಕೇಳಿಕೊಂಡಿರುತ್ತಾರೆ. ಪ್ರತಿವಾದಿಯು ಆಗ ಈಗ ಎಂದು ಸಬೂಬು ಹೇಳಿಕೊಂಡು ಈವರೆಗೂ ಯಾವುದೇ ಹಿಸ್ಸೆ ಮತ್ತು ಭಾಗಾಂಶವನ್ನು ನೀಡಿರುವುದಿಲ್ಲ.

ಹೀಗಿರುವಲ್ಲಿ ವಾದಿಯರು ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರತಿವಾದಿಯ ಹೆಸರಿಗೆ ಇದ್ದ ಪಿತ್ರಾರ್ಜಿತ ಆಸ್ತಿಯನ್ನು ಪ್ರತಿವಾದಿಯು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿರುತ್ತಾರೆ. ಇದರಿಂದ ವಾದಿಯರುಗಳಿಗೆ ತುಂಬಲಾರದ ಕಷ್ಟ ನಷ್ಟಗಳು ಉಂಟಾಗಿರುತ್ತದೆ. ಪ್ರತಿವಾದಿಯು ವಾದಿಯರುಗಳಿಗೆ ಮೋಸ ಮಾಡುವ ದುರುದ್ದೇಶವನ್ನು ಸಹ ಹೊಂದಿರುತ್ತಾರೆ. ಈ ಕಾರಣದಿಂದಾಗಿ ವಾದಿಯರಿಗೆ ಪ್ರತ್ಯೇಕ ಅರ್ಜಿ ಮತ್ತು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ಪ್ರಸ್ತುತ ದಾವೆಯು ಅಂತಿಮವಾಗಿ ತೀರ್ಪು ಮತ್ತು ಡಿಕ್ರಿ ಆಗುವವರೆಗೆ ಪ್ರತಿವಾದಿಯರು ದಾವಾದ ಅನುಸೂಚಿ ಆಸ್ತಿಗಳನ್ನು ಕ್ರಯ, ದಾನ, ಇತರೆ ರೀತಿಯಲ್ಲಿ ಪರಭಾರೆ ಮಾಡದಂತೆ ಮಧ್ಯಕಾಲೀನ ತಾತ್ಕಾಲಿಕ ನಿರ್ಭಂದಕಾಜ್ಞೆಯ ಆದೇಶದ ಮೂಲಕ ತಡೆಹಿಡಿಯುವಂತೆ ಪ್ರಸ್ತತ ದಾವೆಯನ್ನು ಸಲ್ಲಿಸಿರುತ್ತಾರೆ.

**3**. ನ್ಯಾಯಾಲಯದಿಂದ ಪ್ರತಿವಾದಿಗಳಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿದ್ದು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

**4** ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನಗೆ ಉದ್ಭವಿಸುತ್ತದೆ.

1. ವಾದಿಯರು ತಾವು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿದ್ದು, ದಾವಾಸ್ವತ್ತುಗಳು ವಿಭಾಗವಾಗಿರುವುದಿಲ್ಲ ಎಂದು ರುಜುವಾತುಪಡಿಸುವರೇ?

2. ವಾದಿಯರು ದಾವಾಸ್ವತ್ತುಗಳಲ್ಲಿ 1/2 ನೇ ಭಾಗ ಪಡೆಯಲು ಅರ್ಹರು ಎಂದು ರುಜುವಾತುಪಡಿಸುವರೇ?

3. ವಾದಿಯರು ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ?

4. ಏನು ಆದೇಶ ?

**5**. ವಾದಿಯು ತಮ್ಮ ಸಾಧನೆಯ ರುಜುವಾತು ಬಾಬ್ತನ್ನು ರುಜುವಾತು ಪಡಿಸಲು 2ನೇ ವಾದಿಯು ತನ್ನನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ನುಡಿದಿದ್ದು, ಒಟ್ಟು 11 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 11 ಎಂದು ಗುರುತಿಸಿಕೊಂಡಿರುತ್ತಾರೆ.

**6.** ವಾದಿ ಮತ್ತು ಪ್ರತಿವಾದಿಯರ ವಾದ-ವಿವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

**7.** ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

ಅಂಶ-1 : ಸಕಾರಾತ್ಮಕವಾಗಿ
ಅಂಶ-2 : ಸಕಾರಾತ್ಮಕವಾಗಿ
ಅಂಶ-3 : ಸಕಾರಾತ್ಮಕವಾಗಿ
ಅಂಶ-4 : ಅಂತಿಮ ಆದೇಶದಂತೆಃ

## **ಕಾರಣಗಳು**

8. **ಅಂಶ ಸಂಖ್ಯೆ 1 ಮತ್ತು 2–** ಈ ಎರಡು ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯಗಳ ಹಾಗೂ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸಲು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ. ವಾದಿಯರು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯನ್ನು ಹಾಗೂ ದಾವಾ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡದ ಹಾಗೆ ಮತ್ತು ನ್ಯಾಯಾಲಯಕ್ಕೆ ತೋಚಿದ ಇತರೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

9. ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ–1 ಆಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ. ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸುತ್ತಾರೆ.

10. ಈ ಹಂತದಲ್ಲಿಯೇ ವಾದಿಯು ದಾಖಲಿಸಿರುವ ದಾಖಲೆಗಳ ಬಗ್ಗೆ ಚರ್ಚಿಸುವುದು ಅಗತ್ಯವಾಗಿರುತ್ತದೆ. ನಿ.ಪಿ–1 ವಂಶವೃಕ್ಷವಾಗಿದ್ದು, ನಿ.ಪಿ–2 ಸರ್ವೆ ನಂಃ51/2 ರ ಚನ್ನರಾಯಪಟ್ಟಣ ತಾಲ್ಲುಕಿನ ದಂಡಿಗನಹಳ್ಳಿ ಹೋಬಳಿಯ

ಮುರಾರನಹಳ್ಳಿಯ ಪಹಣಿಯಾಗಿದ್ದು, ಮರೀಗೌಡ ಬಿನ್ ಚಂದ್ರೇಗೌಡ ರವರಿಗೆ ಎಂ. ಆರ್ ಟಿ 9/2017-18 ರಂತೆ ವಿಭಜನೆಯ ಮೂಲಕ ಬಂದಿದ್ದು, ಸದರಿಯವರು 20018-19 ರಲ್ಲಿ ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ. ನಿ.ಪಿ-**3** ಸರ್ವೆ ನಂಃ 50 ರ ಚನ್ನರಾಯಪಟ್ಟಣ ತಾಲ್ಲುಕಿನ ದಂಡಿಗನಹಳ್ಳಿ ಹೋಬಳಿಯ ಮುರಾರನಹಳ್ಳಿಯ ಪಹಣಿಯಾಗಿದ್ದು, ಚಂದ್ರೇಗೌಡ ಬಿನ್ ಮರೀಗೌಡ ರವರಿಗೆ ಎಂ. ಆರ್ 5/1995-96 ರಂತೆ ಬಂದಿದ್ದು, ಸದರಿಯವರು 20018-19 ರಲ್ಲಿ ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ ನಿ.ಪಿ- 4 ಋಣ ಭಾರ ರಾಹಿತ್ಯ ಪ್ರಮಾಣ ಪತ್ರವಾಗಿದ್ದು, ನಿಪಿ 5 ಮತ್ತು 6 ವಾದಿಯರ ಆಧಾರ ಕರ್ಡುಗಳಾಗಿದ್ದು, ನಿಪಿ 7, 2 ನೇ ವಾದಿಯ ಚುನಾವಣಾ ಗುರುತಿನ ಚೀಟಿಯಾಗಿದ್ದು, ನಿಪಿ 8 ಪ್ರತಿವಾದಿಯ ತಂದೆ ಮರೀಗೌಡರ ಮರಣ ಪ್ರಮಾಣ ಪತ್ರವಾಗಿದ್ದು, ನಿಪಿ 9 ಮತ್ತು 11 ಧೃಡೀಕೃತ ಮ್ಯುಟೇಷನ್ ರಿಜಿಸ್ಟರ್ ಗಳಾಗಿದ್ದು, ನಿಪಿ 10 ಪಹಣಿ ಪತ್ರವಾಗಿರುತ್ತದೆ.

11. ನಿಪಿ 1 ರ ಪ್ರಕಾರ ವಾದಿಯರು ಮತ್ತು ಪ್ರತಿವಾದಿ ಒಂದೇ ಕುಟುಂಬದ ಸದಸ್ಯರಾಗಿದ್ದು, ಸದರಿಯವರ ಸಂಬಂಧಗಳ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ.

ನಿಪಿ 2 ರಿಂದ 5 ದಾಖಲೆಗಳು ದಾವಾಸ್ವತ್ತು ಚನ್ನಯ್ಯ ಬಿನ್ ಕಲ್ಲಯ್ಯ ರವರಿಗೆ ದರಖಾಸು ಮೂಲಕ ಮಂಜೂರಾಗಿದ್ದು, ಸದರಿಯವರ ಹೆಸರಿಗೆ ಮ್ಯುಟೇಷನ್ ರಿಜಿಸ್ಟರ್ ಮತ್ತು ಪಹಣಿಗಳು ಬಂದಿರುವುದು ಸ್ಪಷ್ಟವಾಗುತ್ತದೆ. ನಿಪಿ-1 ರ ಪ್ರಕಾರ ವಾದಿ ಮತ್ತು 2 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳಾಗಿದ್ದು, ಸದರಿಯವರ ನಡುವೆ ದಾವಾಸ್ವತ್ತಿನಲ್ಲಿ ವಿಭಾಗವಾಗಿರುವುದಿಲ್ಲ. ದಾವಾಸ್ವತ್ತು ಸರ್ಕಾರದಿಂದ ಮಂಜೂರಾಗಿರುವುದರಿಂದ ಅದರಲ್ಲಿ ಎಲ್ಲರಿಗೂ ಸಮಾನವಾದ ಹಿಸ್ಸಾ ಹಕ್ಕು ಇರುತ್ತದೆ. ವಾದಿ ಮತ್ತು 2 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳಾಗಿರುವುದರಿಂದ ಸದರಿಯವರಿಗೆ ದಾವಾಸ್ವತ್ತಿನಲ್ಲಿ ಸಮಾನವಾದ ವಿಭಾಗದ ಹಕ್ಕನ್ನು ಹೊಂದಿರುತ್ತಾರೆ.

12. ದಾವಾ ಸ್ವತ್ತು ವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಳಾಗಿದ್ದು ವಾದಿಯರು ದಾವಾ ಸ್ವತ್ತಿನಲ್ಲಿ ಹಿಸ್ಸೆ ಬರಬೇಕಾಗಿದ್ದು, ಪ್ರತ್ಯೇಕ ಸ್ವಾಧೀನ ಹೊಂದಲು ಅರ್ಹರಾಗಿರುತ್ತಾರೆ. ಪ್ರತಿವಾದಿಯು ವಾದಿಯರ ವಾದಪತ್ರದಲ್ಲಿರುವ ಅಂಶಗಳನ್ನು ಅಲ್ಲಗಳೆಯಲು ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸಿ, ತಮ್ಮನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ. ಅದೇರೀತಿ, ಫ್ರಾಸಾ-1 ರವರನ್ನು ಪಾಟೀಸವಾಲು

ಮಾಡಿರುವುದಿಲ್ಲ. ಆದಕಾರಣ, ದಾವಾಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯ ಒಟ್ಟು ಕುಟುಂಬದ ಮತ್ತು ಅವಿಭಾಜಿತ ಸ್ವತ್ತಾಗಿದ್ದು, ಅದರಲ್ಲಿ ವಾದಿಯರಿಗೆ ಭಾಗಾಂಶವನ್ನು ನೀಡಲು ಪ್ರತಿವಾದಿ ನಿರಾಕರಿಸಿದ್ದರಿಂದ ಸದರಿ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾರೆ. ಈ ಅಂಶಗಳು ಸಹ ದಾವಾ ಆಸ್ತಿಗಳು ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಗಳು ಎಂದು ನಂಬಲು ಪೂರಕವಾದ ಸಾಕ್ಷಾಧಾರಗಳಾಗುತ್ತವೆ. ಈ ಎಲ್ಲಾ ಕಾರಣಗಳಿಂದಾಗಿ ಅಂಶ ನಂಃ1 ಮತ್ತು 2 ನ್ನು **ಸಕಾರಾತ್ಮಕವಾಗಿ** ಎಂದು ಉತ್ತರಿಸಿರುತ್ತೇನೆ.

13. **ಅಂಶ ನಂಃ3–** ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯು ಒಟ್ಟು ಕುಟುಂಬದ ಸದಸ್ಯರಾಗಿದ್ದು, ದಾವಾಸ್ವತ್ತು ಅವಿಭಕ್ತ ಕುಟುಂಬದ ಸ್ವತ್ತಾಗಿದ್ದು, ವಾದಿಯು ಪ್ರತಿವಾದಿಗಳೊಂದಿಗೆ 1/2 ನೇ ಭಾಗದ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನತೆಯ ಹಕ್ಕನ್ನು ಹೊಂದಿರುತ್ತಾರೆ. ಆದುದರಿಂದ ವಾದಿಯು ದಾವಾಸ್ವತ್ತಿನಲ್ಲಿ 1/2 ನೇ ಭಾಗವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಕಾರಣಗಳಿಂದಾಗಿ ಅಂಶ 3 ನ್ನು **ಸಕಾರಾತ್ಮಕವಾಗಿ** ಎಂದು ಉತ್ತರಿಸಿರುತ್ತೇನೆ.

**14. ಅಂಶ ಸಂಖ್ಯೆ –4:** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸುತ್ತದೆ.

## ಆದೇಶ

ವಾದಿಯರು ಸಲ್ಲಿಸಿರುವ ದಾವೆಯನ್ನು ಪುರಸ್ಕರಿಸಲಾಗಿದೆ.

ವಾದಿಯು ದಾವಾ ಆಸ್ತಿಗಳಲ್ಲಿ 1/2 ನೇ ಭಾಗಾಂಶದ ಹಕ್ಕುಳ್ಳವರಾಗಿರುತ್ತಾರೆ.

ವಾದಿಯರು ಮತ್ತು ಪ್ರತಿವಾದಿ ದಾವಾ ಆಸ್ತಿಗಳಲ್ಲಿ ತಲಾ 1/2 ನೇ ಭಾಗಾಂಶದ ಹಕ್ಕುಳ್ಳವರಾಗಿರುತ್ತಾರೆ.

ಪ್ರತಿವಾದಿಗಳು ತಮ್ಮ ಭಾಗಾಂಶಕ್ಕೆ ಸಂಬಂಧಿಸಿದಂತೆ ತಮ್ಮ ನ್ಯಾಯಾಲಯದ ಶುಲ್ಕ ಪಾವತಿಸತಕ್ಕದ್ದು.

ಈ ಮೇಲಿನಂತೆ ಪ್ರಾಥಮಿಕ ಡಿಕ್ರಿ ತಯಾರಿಸಲು ಆದೇಶಿಸಲಾಗಿದೆ.

In view of the directions issued by the Hon'ble Apex Court in a Judgment reported in 2022 SCC On-line SC 737 (Kattukandi Edathil Krishnan and another V/s Kattukandi Edathil Valsan and others)

and Circular No.DJA-1/1105 dated 21.10.2022 issued by Hon'ble High Court of Karnataka, when the preliminary decree is passed in a partition suit, the Court has to initiate final decree proceedings under Order 20 Rule 18 of CPC by suo moto.

Hence, office is directed to register a Final Decree Proceedings under Order 20 Rule 18 of CPC based on preliminary decree after appeal period is over and keep a certified copy of preliminary decree passed in this suit and other records in the FDP proceedings.

(ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಸಹಿ ಮಾಡಿ ದಿನಾಂಕಃ 06 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಪುರುಷೋತ್ತಮ ಟಿ.ಪಿ.)**
1 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.

## -:ಅನುಬಂಧ :-

**ವಾದಿ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿಃ**

| | | |
|---|---|---|
| ಪಿ.ಡಬ್ಲ್ಯೂ-1 | : | ಲಕ್ಷ್ಮಮ್ಮ |

**ವಾದಿ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ-1 | : | ವಂಶವೃಕ್ಷ |
| ನಿಪಿ-2& 3 | : | ಪಹಣಿ ಗಳು |
| ನಿಪಿ- 4 | : | ಋಣ ಭಾರ ರಾಹಿತ್ಯ ಪ್ರಮಾಣ ಪತ್ರ |
| ನಿಪಿ-5& 6 | : | ಆಧಾರ್ ಕಾರ್ಡುಗಳು |
| ನಿಪಿ-7 | : | ಮತದಾರರ ಗುರುತಿನ ಚೀಟಿ |
| ನಿಪಿ-8 | : | ದೃಢೀಕೃತ ಎಂ ಆರ್ ಪ್ರತಿ |
| ನಿಪಿ-9&11 | : | ದೃಢೀಕೃತ ಎಂ ಆರ್ ಪ್ರತಿಗಳು |
| ನಿಪಿ-10 | : | ಪಹಣಿ |

**ಪ್ರತಿವಾದಿಗಳ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿಃ**

ಇಲ್ಲ

**ಪ್ರತಿವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ಇಲ್ಲ

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.